ಕೊಡುವುದೇ ಒಳ್ಳೆಯವದಲ್ಲವೆ? ಅಥವಾ ಕೊಡುವುದನ್ನು ಎರಡುಮೂರು ದಿನಗಳಲ್ಲೇ ಲಕೋಟೆಗೆ ಹಾಕಿಕೊಟ್ಟರೆ ಸರಿಯಾದೀತು... ಹೌದು ಹಾಗೇ ಮಾಡಬೇಕು ಎಂದುಕೊಳ್ಳುವಷ್ಟರಲ್ಲೇ ಮುಂದಿನ ಎರಡು ದಿನಗಳು ಉರುಳಿ ಹೋಗಿದ್ದವು. ಬಾಲನ್ ಅಂದು ಬಂದಾನೆಂದು ಕತ್ತು ಉದ್ದ ಮಾಡಿದ್ದೇ ಬಂತು. ಮದುವೆ ದಿನವೂ ಕಳೆದುಹೋಗಿತ್ತು. ಆಹ್ವಾನ ಪತ್ರಿಕೆಯನ್ನು ಅದೆಲ್ಲಿ ಇಟ್ಟಿದ್ದೆನೋ ಮತ್ತೆ ಸಿಕ್ಕಲೇ ಇಲ್ಲ. ಬೇರೆಯವರಲ್ಲಿಯೂ ವಿಚಾರಿಸಿದೆ. ಅಂತೂ ಯಾರೋ ಒಬ್ಬರು ಪತ್ರಿಕೆಯಲ್ಲಿನ ಚರವಾಣಿಯ ಸಂಖ್ಯೆಯನ್ನು ಕೊಟ್ಟಿದ್ದರು.

ಫೋನ್ ಮೂಲಕವಾದರೂ ಬಾಯ್ತುಂಬ ಹರಸೋಣ ಎಂದುಕೊಂಡರೆ, ಉಹುಂ... 'ಅಸ್ತಿತ್ವದಲ್ಲಿಲ್ಲ' ಎಂಬ ಸಂದೇಶ ಬರತೊಡಗಿತ್ತು. ಇಲ್ಲ... ಬಾಲನ್ ಬರಲೇ ಇಲ್ಲ... ಏನು ಮಾಡುವುದು... ಏನು ಮಾಡುವುದು... ವಾರಗಳು, ತಿಂಗಳುಗಳು ಉರುಳಿದವು. ಈ ಪರಿಯಲ್ಲಿ ಅವನನ್ನು ಹಚ್ಚಿಕೊಂಡಿರುವ ಬಗೆಗೆ ನನಗೇ ಆಶ್ಚರ್ಯ. ನಾವು ಗೆಳತಿಯರು, ನೆರೆ ಹೊರೆಯವರು ಬೇರೆ ತರಕಾರಿ ಗಾಡಿಯವರ ಹತ್ತಿರ ವಿಚಾರಿಸಿದೆವು. ಅಂತೂ ಒಬ್ಬಾತ, 'ಅವನು ತರಕಾರಿ ಗಾಡಿ ತರ್ತಾ ಇಲ್ಲ.' ಎಂದು ಒಂದು ವಾರ್ತೆ ತಿಳಿಸಿದ. 'ಮತ್ತೇನು ಮಾಡ್ತಾನೆ?' ಎಂಬ ಪ್ರಶ್ನೆಗೆ 'ನನಗೇನಮ್ಮ ಗೊತ್ತು?' ಎಂಬ ಪ್ರಶ್ನೆಯ ಪ್ರತಿಕ್ರಿಯೆಯಲ್ಲಿ ಸುಮ್ಮನೆ ಯಾಕೆ ಬೇರೆಯವರ ವಿಷಯ ಎಂಬಂತಹ ಭಾವ ಅಡಗಿರಬೇಕು. ತರಕಾರಿ ಕೊಳ್ಳಲು ಇವರಿಗೆ ಅವನೇ ಏಕೆ ಬೇಕು ಎಂಬ ಅಸೂಯೆಯ ಮುಸುಕು ಇದ್ದಿರಬಹುದು.

ಯಾರಯಾರ ಋಣ ಎಷ್ಟಿರುತ್ತದೆಯೋ... ಹಾಗೆಯೇ ಒಬ್ಬರನ್ನು ಹಚ್ಚಿಕೊಳ್ಳುವುದು, ಭೇಟಿ ಮಾಡುವುದು, ಮಾತನಾಡುವುದು ಎಲ್ಲಕ್ಕೂ ಋಣ ಎಂಬುದಿರಬೇಕೇನೋ. ನೋಡೋಣ... ಮುಂದೆ ತರಕಾರಿ ವ್ಯಾಪಾರಕ್ಕಾಗಿ ಬಂದಾನು ಎಂದು ನಾನೇ ಸಾಂತ್ವನಿಸಿಕೊಂಡರೂ ಒಂದು ವೇಳೆ ಮತ್ತೆಂದೂ ಬಾರದಿದ್ದರೆ...

ಛೆ... ಹಾಗೇಕೆ ಅಂದುಕೊಳ್ಳಬೇಕೆಂಬ ಭಾವ... ಒಟ್ಟಾರೆ ಇರಿಸುಮುರಿಸಿನ ಸ್ಥಿತಿ ನನ್ನದಾಗಿತ್ತು. ನಾವು ಬೇರೆಯವರಿಂದ ಕೊಳ್ಳುವ ಬಲಿತ, ಹಾಳಾದ ತರಕಾರಿಗಳು ಮತ್ತೆ ಮತ್ತೆ ಬಾಲನ್‌ನನ್ನು ನೆನಪು ಮಾಡತೊಡಗಿದ್ದವು.

ಆ ಒಂದು ದಿನ ತರಕಾರಿಯವನೊಬ್ಬನು ಸುದ್ದಿಯೊಂದನ್ನು ತಂದಿದ್ದ. 'ಏನಂದುಕೊಂಡಿದ್ದೀರಿ ಅಮ್ಮಾವ್ರೆ... ಬಾಲನ್ ಈಗ ದೊಡ್ಡ ಮನುಷ್ಯ ಆಗಿಬಿಟ್ಟಿದ್ದಾನೆ. ಹೆಂಡತಿಯ ಮನೆಗೆ ಹೋಗುತ್ತಾನಂತೆ. ಚೆನ್ನೈಯಲ್ಲಿಯೇ ತರಕಾರಿ ಅಂಗಡಿ ಇಟ್ಟುಕೊಳ್ಳುತ್ತಾನಂತೆ. ಹೆಂಡತಿ ಅಲ್ಲೇ ಶಾಲೆಯಲ್ಲಿ ಶಿಕ್ಷಕಿಯ ಕೆಲಸ ಮಾಡುತ್ತಾಳೆ. ಅವನಿಗೆ ಅದೃಷ್ಟ ಖುಲಾಯಿಸಿದೆ.' ಆತನ ಮಾತಿನಲ್ಲಿ ಅಸೂಯೆ ಢಾಳಾಗಿಯೇ ಇಣುಕುತ್ತಿದ್ದುದು ಸ್ಪಷ್ಟವಾಗಿತ್ತು. ತಮ್ಮಂತೆಯೇ ಗಾಡಿ ತಳ್ಳಿಕೊಂಡು ತರಕಾರಿ ಮಾರುತ್ತಿದ್ದವನಿಗೆ ಹೀಗೆ ನಸೀಬು ಹೊಡೆಯುತ್ತದೆ ಎಂದರೆ... ಯಾವತ್ತಿಗೂ ಆರಕ್ಕೇರದ ತಮ್ಮ ಆರ್ಥಿಕ ಸ್ಥಿತಿ... ಇದೇ ಬೀದಿಗಳು... ಹೀಗೆಯೇ ತರಕಾರಿಯ ಮಾರಾಟಕ್ಕಾಗಿ ಸುತ್ತಾಟ... 'ಅವನ ಯೋಚನೆ ಬಿಟ್ಟುಬಿಡಿ ಅಮ್ಮಾವ್ರೆ... ಅವನಿಗೆ ನಿಮ್ಮ ನೆನಪಾದರೂ ಇದ್ದಾತಾ...' ಆತನ ಹೊಟ್ಟೆಕಿಚ್ಚಿನ ಮಾತುಗಳು ನನಗೇಕೊ ಸಹ್ಯವಾಗಲಿಲ್ಲ. 'ಒಟ್ಟಾರೆ ಅವರು ಸುಖವಾಗಿದ್ದರೆ ಸಾಕು. ಅಲ್ಲಿಯೇ ಇಬ್ಬರೂ ಚೆನ್ನಾಗಿರಲಿ,' ಎಂದ ನನ್ನ ಮಾತು ಆತನಿಗೆ ತುಸು ಒರಟಾಗಿದ್ದಂತೆ ಕಂಡಿರಬೇಕು.

ಅವನು ಮುಂದೆ ಸಾಗುತ್ತಿದ್ದಂತೆ ನನ್ನ ಮನಸ್ಸಿನಲ್ಲಿ ಬಾಲನ್‌ನ ವಿಷಯ ತಿಳಿದ ಬಗ್ಗೆ ಸಮಾಧಾನ. ಆತ ಹೇಳಿದ ವಿಷಯ ನಿಜವಾಗಲಿ ಎಂದು ಹೃದಯಪೂರ್ವಕ ಹಾರೈಸಿದ್ದೆ. ಗಂಡ